**ಪತ್ರಿಕಾ ಪ್ರಕಟಣೆಗಾಗಿ**

**ದಿನಾಂಕ: 21-03-2020**

# ಗ್ರಾಮ ಸ್ವರಾಜ್ಯವೆನ್ನುವುದು ಕರ್ನಾಟಕದಲ್ಲಿ ನನಸಾಗದ ನಿರಂತರ ಕನಸು

## ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿಯ ಮೂಲಕ ಗ್ರಾಮ ಸ್ವರಾಜ್ಯದಿಂದ ಹಿಂದಡಿ ಇಡುತ್ತಿರುವ ಸರ್ಕಾರ

ಕರ್ನಾಟಕ ಸರ್ಕಾರವು ಪ್ರಸ್ತುತ ಇರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ಕ್ಕೆ ತಿದ್ದುಪಡಿ ತರುವ ನಿಟ್ಟಿನಲ್ಲಿ, ಪ್ರಸ್ತಾಪಿತ ತಿದ್ದುಪಡಿ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಿದೆ. **ಗ್ರಾಮೀಣಾಭಿವೃದ್ಧಿಯ ಮಹದಾಶಯದಿಂದ ಜಾರಿಗೆ ಬಂದಿರುವ ಗ್ರಾಮ ಸ್ವರಾಜ್ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯ ಕ್ರಮಕೈಗೊಂಡು ಸ್ಥಳೀಯ ಸ್ವಯಂ ಸರ್ಕಾರಗಳ ಸಬಲೀಕರಣದಲ್ಲಿ ಮುಂಚೂಣಿಯಲ್ಲಿರಬೇಕಾಗಿದ್ದ ಸರ್ಕಾರವೇ ಕೇವಲ ಅಧಿಕಾರದಾಹಿ ಮನೋಭಾವದಿಂದ ಕಾಯ್ದೆ ತಿದ್ದುಪಡಿ ಮಾಡುವ ಮೂಲಕ ಗ್ರಾಮ ಮಟ್ಟದಿಂದಲೇ ಜನರನ್ನು ಅಧಿಕಾರಕ್ಕಾಗಿ ಲಾಲಸೆ, ಕಿತ್ತಾಟಕ್ಕೆ ಒಳಗೊಂಡು, ಅಭಿವೃದ್ಧಿಯತ್ತ ಬೆನ್ನುಹಾಕಲು ಪ್ರೇರೇಪಿಸುವಂತಹ ತಿದ್ದುಪಡಿಗೆ ಮುಂದಾಗಿರುವುದು ಖಂಡನೀಯ.** 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ 2020'ರಲ್ಲಿರುವ ಅಂಶಗಳು ಜನಾಭಿವೃದ್ಧಿಗೆ ಹಾಗೂ ಗ್ರಾಮ ಸ್ವರಾಜ್ಯದ ಆಶಯವನ್ನು ಬದಿಗೊತ್ತಿ, ಅಧಿಕಾರಕ್ಕಾಗಿಯೇ ಸರ್ಕಾರ ಎಂಬುದನ್ನು ಒತ್ತಿ ಹೇಳಿದಂತಿದೆ. ಸರ್ಕಾರದ ಇಂತಹ ನಡೆಯನ್ನು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ತೀವ್ರವಾಗಿ ಖಂಡಿಸುತ್ತದೆ.

**ಪ್ರಮುಖವಾಗಿ ಗ್ರಾಮ ಸ್ವರಾಜ್ಯದ ಆಶಯಕ್ಕೆ ಮತ್ತು ಜನಾಭಿವೃದ್ಧಿಗೆ ವಿರುದ್ಧವಾಗಿರುವ ತಿದ್ದುಪಡಿ ಅಂಶಗಳು:**

1. **ಗ್ರಾಮ/ತಾಲೂಕು/ಜಿಲ್ಲಾ ಪಂಚಾಯತ್‌ನಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ. ವಿಶೇಷವಾಗಿ ಮಹಿಳೆಯರಿಗೆ ಆದ್ಯತೆ ನೀಡಿ ನೀಡಿರುವ ಮೀಸಲಾತಿಯ ಅವಧಿ 10 ವರ್ಷದಿಂದ 5 ವರ್ಷಕ್ಕೆ ಕಡಿತ:** ಪ್ರಮುಖವಾಗಿ ಗ್ರಾಮ/ತಾಲೂಕು/ಜಿಲ್ಲಾ ಪಂಚಾಯತ್‌ನಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ಅದರಲ್ಲೂ ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ ಸದಸ್ಯತ್ವ ಸ್ಥಾನಕ್ಕೆ ಇರುವ 10 ವರ್ಷಗಳ ಅವಧಿಯ ಮೀಸಲಾತಿಯನ್ನು 5 ವರ್ಷಗಳಿಗೆ ಕಡಿತಗೊಳಿಸ ಹೊರಟಿರುವುದು ಮಹಿಳಾ ಸಶಕ್ತತೆಗೆ, ಹಿಂದುಳಿದ ವರ್ಗದವರ ಸಬಲೀಕರಣಕ್ಕೆ ಎಷ್ಟರ ಮಟ್ಟಿಗೆ ಸರ್ಕಾರ ಆದ್ಯತೆ ನೀಡುತ್ತಿದೆ ಎಂಬುದು ಅರ್ಥವಾಗುತ್ತದೆ. ಅವರ ನಾಯಕತ್ವ ಬೆಳವಣಿಗೆಗೆ, ಅವರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಹಾಗೂ ಸರ್ಕಾರ ಮತ್ತು ಆಡಳಿತದ ಬಗ್ಗೆ ಸಕಾರಾತ್ಮಕ ಮನೋಭಾವ ಬೆಳೆಸುವಲ್ಲಿ ಸಹಕಾರಿಯಾಗಿರಲೆಂದು, ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ, ಗ್ರಾಮ ಸಭೆಗೆ ತಮ್ಮ ಉತ್ತರದಾಯಿತ್ವ ಹಾಗೂ ತಮ್ಮ ಕ್ಷೇತ್ರದ ಅಗತ್ಯತೆಗಳನ್ನು ಪೂರೈಸಲು ಇರುವ ಬದ್ಧತೆಯನ್ನು ಆಳವಾಗಿ ಅರ್ಥ ಮಾಡಿಕೊಳ್ಳುವ ಮನೋಭಾವವವನ್ನು ಬೆಳೆಸಿಕೊಳ್ಳಲು 10 ವರ್ಷದ ಅವಧಿ ಸಹಕಾರಿಯಾಗುತ್ತದೆ ಎಂದೇ ಆಲೋಚಿಸಿ ಈ ಬದಲಾವಣೆ ಮಾಡಲಾಗಿತ್ತು.
2. **ತ್ರಿಸ್ಥರ ಪಂಚಾಯತ್‌ಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಅಧಿಕಾರಾವಧಿ 5 ವರ್ಷದಿಂದ 30 ತಿಂಗಳಿಗೆ ಇಳಿಕೆ:** ತ್ರಿಸ್ಥರ ಪಂಚಾಯತ್‌ಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಅವಧಿಯು ಹಾಲಿ ಇರುವ ಐದು ವರ್ಷಗಳಿಂದ ಎರಡುವರೆ ವರ್ಷಗಳಿಗೆ (30 ತಿಂಗಳು) ಮೊಟಕುಗೊಳಿಸಿರುವುದರ ನೇರ ಪರಿಣಾಮವು ಇಡೀ ಗ್ರಾಮ ಪಂಚಾಯತ್ ವ್ಯವಸ್ಥೆಯ ಮೇಲಾಗುತ್ತದೆ. ಇದನ್ನು, ಗ್ರಾಮೀಣಾಭಿವೃದ್ಧಿಯ ದಿಕ್ಕು ತಪ್ಪಿಸುವತ್ತ ಸರ್ಕಾರದ ಮೊದಲ ಪ್ರಯತ್ನವೆಂದರೂ ತಪ್ಪಾಗಲಾರದು. ಗ್ರಾಮ ಸ್ವರಾಜ್ ಕಾಯಿದೆಯ ರಚನೆಯ ಸಂದರ್ಭದಲ್ಲಿ ಆಗಿರುವ ಅಧಿಕಾರಾವಧಿ 30 ತಿಂಗಳಿನಿಂದ ಉಂಟಾಗುತ್ತಿರುವ ಸಮಸ್ಯೆಗಳನ್ನು ಮನಗಂಡೇ 5 ವರ್ಷಗಳ ವರೆಗೆ ಅಧಿಕಾರಾವಧಿ ಎಂದು ತಿದ್ದುಪಡಿ ಮಾಡಲಾಗಿತ್ತು. ಸ್ಥಳೀಯಮಟ್ಟದಲ್ಲಿ ಅಧಿಕಾರಕ್ಕಾಗಿ ಕುದುರೆ ವ್ಯಾಪಾರಕ್ಕೆ, ಕುರ್ಚಿಗಾಗಿ ಕಾದಾಟಕ್ಕೆ ತಡೆ ಹಾಕಲು ಮತ್ತು ಜನರಿಗೆ ಉತ್ತರದಾಯಿಯಾಗಿ ಆ ಸಮಯವನ್ನು ಕ್ಷೇತ್ರದ ಅಭಿವೃದ್ಧಿಯತ್ತ ಗಮನ ನೀಡುವಂತೆ ಮಾಡಲು ಈ ಬದಲಾವಣೆ ಮಾಡಲಾಗಿತ್ತು. ಆದರೆ ತ್ರಿಸ್ಥರ ಪಂಚಾಯತ್‌ಗಳ ಚುಕ್ಕಾಣಿ ಹಿಡಿಯುವವರಿಗೆ ಅಭಿವೃದ್ಧಿಯತ್ತ ಗಮನಹರಿಸುವುದಕ್ಕಿಂತ ಅಧಿಕಾರವೇ ಅತ್ಯಂತ ಪ್ರಮುಖವಾದುದು ಎಂಬ ಲಾಲಸೆಯನ್ನು ಹುಟ್ಟುಹಾಕುವಲ್ಲಿ, ಅದಕ್ಕಾಗಿಯೇ ತಮ್ಮೆಲ್ಲಾ ಸಮಯವನ್ನು ಮೀಸಲಿಡುವಲ್ಲಿ ಈ ತಿದ್ದುಪಡಿ ಉತ್ತೇಜಿಸುತ್ತದೆ. ಅಲ್ಲದೇ ಗ್ರಾಮ ಮಟ್ಟದಲ್ಲಿ ಪಕ್ಷ ರಾಜಕೀಯವನ್ನು ಎಳೆಯಲು ಇದು ಕಾರಣವಾಗುತ್ತದೆ.
3. **ಗ್ರಾಮಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಸೂಚನೆ:** ತಿದ್ದುಪಡಿ ಮಸೂದೆಯು ಅವಿಶ್ವಾಸ ಗೊತ್ತುವಳಿ ಅವಧಿಯನ್ನು 30 ತಿಂಗಳಿನಿಂದ 15 ತಿಂಗಳಿಗೆ ಕಡಿತಗೊಳಿಸಿದೆ. ಅದಕ್ಕೆ ಪೂರಕವಾಗಿ ಅಂತಹ ನಿರ್ಣಯವನ್ನು ನೀಡಿದ ದಿನಾಂಕದಿಂದ 6 ತಿಂಗಳ


***ಸ್ಫೂರ್ತಿದಾತರು:***

**ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀ೦ಯ ೦ಯೋಜನಾ ಆ೦ಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀ೦ಯ ರಾ೦ಯಭಾರಿಗಳು

**ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

***ಸಲಹಾ ಸಮಿತಿ ಸದಸ್ಯರು:***

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆ೦ಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾ೦ರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲ೦ಯ, ಭಾರತ ಸರಕಾರ

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಂಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

**ಶ್ರೀಮತಿ ನಂದನಾ ರೆಡ್ಡಿ**
ಸಂಚಾಲಕರು

***ಸಂಯೋಜನಾ ಸಮಿತಿ:***

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**

***ಸಂಯೋಜಕರು:***

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು–560 017
ಫೋನ್: 080–25234270, 25234272, 25234611
ಇ–ಮೇಲ್: cwc@pobox.com
cwcblr@gmail.com
ವೆಬ್: www.theconcernedforworkingchildren.org

ಒಳಗೆ ನೀಡತಕ್ಕದ್ದಲ್ಲ ಎಂದಿದೆ (ಗ್ರಾಮ ಸ್ವರಾಜ್ ಕಾಯಿದೆಯಲ್ಲಿರುವ 2 ವರ್ಷದ ಬದಲಾಗಿ). ಇದೂ ಸಹ ಪಂಚಾಯತ್‌ನಲ್ಲಿ ಜನಪರ ಅಭಿವೃದ್ಧಿಯನ್ನು ಕಡೆಗಣಿಸಿ ಕೇವಲ ಅಧಿಕಾರದಾಹಿಯಾಗಿ ಸಂಗೀತ ಕುರ್ಚಿಯ ಆಟಕ್ಕೆ, ಪಕ್ಷ ರಾಜಕೀಯಕ್ಕೆ, ಕುದುರೆ ವ್ಯಾಪಾರಕ್ಕೆ ಎಡೆ ಮಾಡಿಕೊಡುತ್ತದೆ. ಜನರಿಗೆ ಉತ್ತರದಾಯಿಯಾಗಿರಬೇಕಾದವರು ಅಧಿಕಾರದಾಸೆಗೆ ಬಿದ್ದು ಪಂಚಾಯತ್ ವ್ಯವಸ್ಥೆಯನ್ನೇ ಬುಡಮೇಲು ಮಾಡುವತ್ತ ವಾಲುವಂತಾಗಲು ಈ ತಿದ್ದುಪಡಿ ಪುಷ್ಟಿ ನೀಡುತ್ತದೆ.

4. **ಪಂಚಾಯತ್ ನಿಧಿ ಅಥವಾ ಆಸ್ತಿಯ ದುರುಪಯೋಗ, ಯೋಜನೆಯ ದುರ್ಬಳಕೆ ಮಾಡಿಕೊಂಡ ಸದಸ್ಯರ ಅನರ್ಹತೆ ಕೇವಲ 6 ವರ್ಷಕ್ಕೆ ಸೀಮಿತವೆಂಬ ತಿದ್ದುಪಡಿ:** ಪ್ರಸ್ತುತ ಇರುವ ಕಾಯಿದೆಯು ಯಾವುದೇ ಸದಸ್ಯನು ತನ್ನ ಸದಸ್ಯತ್ವದ ಅವಧಿಯಲ್ಲಿ ಪಂಚಾಯತ್‌ನ ನಿಧಿಯ ಅಥವಾ ಇತರ ಆಸ್ತಿಗಳ ದುರುಪಯೋಗ ಅಥವಾ ಪಂಚಾಯತ್‌ನ ಯಾವುದೇ ಕಾರ್ಯಕ್ರಮವನ್ನು, ಯೋಜನೆಯನ್ನು ಅಥವಾ ಪ್ರಾಜೆಕ್ಟನ್ನು ಜಾರಿಗೊಳಿಸುವಾಗ ಪಂಚಾಯತ್ ಸದಸ್ಯನಾಗಿ ಅವನು ತನ್ನ ಅಧಿಕಾರವನ್ನು ಅಥವಾ ಪ್ರಾಧಿಕಾರವನ್ನು **ದುರುಪಯೋಗ ಅಥವಾ ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಕೃತ್ಯದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿರುವ ತಪ್ಪಿತಸ್ಥನೆಂದು ಕಂಡುಬಂದರೆ ಅಂತಹ ವ್ಯಕ್ತಿಯು ವ್ಯಕ್ತಿಯು, ಗ್ರಾಮ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು ಎಂದು ಹೇಳಿದೆ. ಆದರೆ ಪ್ರಸ್ತಾಪಿಸಿರುವ ತಿದ್ದುಪಡಿಯು ಈ ಅನರ್ಹತೆಯನ್ನು ಕೇವಲ 6 ವರ್ಷಕ್ಕೆ ಸೀಮಿತಗೊಳಿಸಿದೆ. ಅಂದರೆ ಪ್ರಸ್ತುತ ಇರುವ ಅವಧಿಗಿಂತ ಹೆಚ್ಚೆಂದರೆ ಇನ್ನೊಂದು ಅವಧಿಗೆ ಮಾತ್ರ ಆ ವ್ಯಕ್ತಿ ಅನರ್ಹನಾಗಿರುತ್ತಾನೆ/ಳೆ!**

5. **ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟಲು ಇರುವ ಮಹತ್ತರ ಕಾಯಿದೆಗೆ ತಿದ್ದುಪಡಿ:** ಪ್ರಸ್ತಾಪಿತ ತಿದ್ದುಪಡಿಯು ಎಲ್ಲಾ ಮತಗಟ್ಟೆಗಳಲ್ಲಿ ಚುನಾವಣಾ ಸಂದರ್ಭದಲ್ಲಿ ಪಾರದರ್ಶಕತೆಯನ್ನು ಎತ್ತಿಹಿಡಿಯಲು ಮಾಡಬೇಕಾಗಿದ್ದ ವಿಡಿಯೋ ಚಿತ್ರೀಕರಣವನ್ನು ಕೇವಲ ಅತಿಸೂಕ್ಷ್ಮ ವಲಯಗಳಿಗೆ ಮಾತ್ರ ಸೀಮಿತಗೊಳಿಸಿದೆ. ಅಲ್ಲದೇ ಯಾವ ಪಂಚಾಯತ್ ಪ್ರದೇಶದಲ್ಲಿ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೆಯೋ ಆ ಪಂಚಾಯತ್ ಪ್ರದೇಶದ ಒಳಗೆ **ನೀತಿ ಸಂಹಿತೆಯು ಜಾರಿಯಲಿಲ್ರುವ ಇಡೀ ಅವಧಿವರೆಗೆ** ಎಲ್ಲಾ ಮದ್ಯದ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚತಕ್ಕದ್ದು ಎಂಬುದನ್ನು ಬದಲಾಯಿಸಿ **ಕೇವಲ ಮತದಾನ ನಡೆಯುವ 48 ಗಂಟೆಗಳ ಮೊದಲು** ಎಂದು ಸೀಮಿತಗೊಳಿಸಿದೆ. ಅಲ್ಲದೇ ಮದ್ಯದ ಅಂಗಡಿಗಳ ಮತ್ತು ಮದ್ಯ ತಯಾರಿಕಾ ಘಟಕಗಳ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರವಾಗಿ ವ್ಯವಸ್ಥಾಪಕರು **ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವ ಅವಧಿಯಲ್ಲಿ** ತಮ್ಮ ಘಟಕಗಳನ್ನು ಮುಚ್ಚತಕ್ಕದ್ದು ಮತ್ತು ಮೊಹರು ಮಾಡಿ ಕೀಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ ಒಪ್ಪಿಸತಕ್ಕದ್ದು ಎಂಬುದನ್ನೂ ಸಹ **ಕೇವಲ ಮತದಾನ ನಡೆಯುವ 48 ಗಂಟೆಗಳ ಮೊದಲು ಎಂದು** ಸೀಮಿತಗೊಳಿಸಿದೆ. **ಇದು ಚುನಾವಣೆಯಲ್ಲಿ ಜನರನ್ನು ಆಮಿಷಕ್ಕೊಳಪಡಿಸಲು, ತಮಗಿರುವ ಅಧಿಕಾರವನ್ನು ಉಪಯೋಗಿಸಿ, ವ್ಯವಸ್ಥೆಯನ್ನು ತಮಗೆ ಬೇಕಾದಂತೆ ಬಳಸಿಕೊಳ್ಳಲು, ಆ ಮೂಲಕ ಜನರ ಮೇಲೆ ಪ್ರಭಾವ ಬೀರಲು, ಕಾನೂನು ಮತ್ತು ನೀತಿ ನಿಯಮಗಳನ್ನು ತಮಗೆ ಬೇಕಾದಂತೆ ದುರುಪಯೋಗಪಡಿಸಿಕೊಳ್ಳಲು ದಾರಿ ಮಾಡಿಕೊಡುತ್ತದೆ. ಅಲ್ಲದೇ ಮದ್ಯಮಾರಾಟಗಾರರ ಹಂಗಿಗೆ ಒಳಪಟ್ಟು ಸರ್ಕಾರ ಈ ನಿರ್ಧಾರ ಕೈಗೊಂಂಡಂತಿದೆ. ಆ ಮೂಲಕ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವ ಪ್ರಯತ್ನಕ್ಕೆ ಇದು ಎಡೆ ಮಾಡಿಕೊಡುತ್ತದೆ.**

ಸಂವಿಧಾನಾತ್ಮಕವಾಗಿ ಜನರಿಗಿರುವ ಹಕ್ಕನ್ನು, ಅಧಿಕಾರವನ್ನು ಎತ್ತಿ ಹಿಡಿಯುತ್ತಿದ್ದ, ಜನಾಭಿವೃದ್ಧಿಗೆ ಒತ್ತು ನೀಡುತ್ತಿದ್ದ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆಯನ್ನು ಹೀಗೆ ಅತ್ಯಂತ ಅಧಿಕಾರ ಪ್ರೇರಿತ ಹಲವಾರು ತಿದ್ದುಪಡಿಗಳಿಂದ ದುರ್ಬಲಗೊಳಿಸಿ, ಗ್ರಾಮ ಸ್ವರಾಜ್ಯದ ಮಹಾತ್ವಾಕಾಂಕ್ಷೆಗೆ ಕೊಡಲಿಪೆಟ್ಟು ನೀಡುತ್ತಿದೆ. ಗ್ರಾಮ ಸಭೆಯನ್ನು ಸದೃಢಗೊಳಿಸಿ ಜನಾಧಿಕಾರವನ್ನು ಎತ್ತಿಹಿಡಿಯುವ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸಲು ಕೈಗೊಳ್ಳಬೇಕಾದ ನೂರಾರು ಕಾರ್ಯಗಳು ಸರ್ಕಾರದ ಮುಂದಿದೆ. ಆದರೆ ಅವನ್ನೆಲ್ಲಾ ಬದಿಗಿಟ್ಟು ಅನಗತ್ಯ, ಪ್ರಜಾತಂತ್ರಕ್ಕೆ ವಿರುದ್ಧವಾದ ಕಾಯ್ದೆಯ ತಿದ್ದುಪಡಿಗಳ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಅಧಃಪತನಕ್ಕೆ ಕಾರಣವಾಗುವ ನಡೆಗಳನ್ನು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ಸರ್ಕಾರದ ಇಂತಹ ಎಲ್ಲಾ ನಡೆಗಳನ್ನು ಪ್ರಶ್ನಿಸುತ್ತದೆ ಹಾಗೂ ತೀವ್ರವಾಗಿ ಖಂಡಿಸುತ್ತದೆ. ಅಲ್ಲದೇ, ಸರ್ಕಾರವು ತಕ್ಷಣ ತನ್ನ ಈ ನಿರ್ಧಾರದಿಂದ ಹಿಂದೆ ಸರಿದು, ಈಗಾಗಲೇ ಇರುವ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಡಿಯಿಡಬೇಕೆಂದು ಒತ್ತಾಯಿಸುತ್ತದೆ.

ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಪರವಾಗಿ
ಕೃಪಾ ಎಂ.ಎಂ.

ಹೆಚ್ಚಿನ ಮಾಹಿತಿಗಾಗಿ:
ಕೃಪಾ ಎಂ.ಎಂ. – 99453 75430
ಕವಿತ ರತ್ನ – 94489 90480